ಮುಂಜಾವು
ವಾರಪತ್ರಿಕೆ.
ಸಂಪಾದಕ: ಸಿರಿಮನೆ ನಾಗರಾಜ್
ರಜಿಸ್ಟರ್ಡ್ ನಂ ಕೆಆರ್ಎನ್ಎಸ್ - 19
3ನೇ ವರ್ಷ 35ನೇ ಸಂಚಿಕೆ ಕೊಪ್ಪ 2-6-1985 ಭಾನುವಾರ ಬೆಲೆ 40 ಪೈಸೆ

ಕ್ಷೇತ್ರದಲ್ಲಿ ಮಲ್ಲಿಕಾರ್ಜುನಯ್ಯ ಪ್ರವಾಸ

ಕೊಪ್ಪ: ಬಿಜೆಪಿ ನಾಯಕ ಹಾಗೂ ವಿಧಾನ ಪರಿಷತ್ ಉಪಾಧ್ಯಕ್ಷ ಎಸ್. ಮಲ್ಲಿಕಾರ್ಜುನಯ್ಯ ಮೇ 30 ರಂದು ಶೃಂಗೇರಿ ಕ್ಷೇತ್ರದಲ್ಲಿ ಪ್ರವಾಸ ಮಾಡಿದರು.

ಚುನಾವಣೆ ನಂತರ ಕಾರ್ಯಕರ್ತರ ಸ್ಥಿತಿಗತಿ ತಿಳಿಯುವುದು, ಜಿಲ್ಲಾ ಪರಿಷತ್ ಚುನಾವಣೆಗೆ ಸಿದ್ಧತೆ, ಪಕ್ಷದ ನಾಂಸ್ಥಿಕ ಚುನಾವಣೆಗಳಿಗೆ ಭೂಮಿಕೆ ಸಿದ್ಧಪಡಿಸುವುದು ಇವು ಪ್ರವಾಸದ ಮುಖ್ಯ ಉದ್ದೇಶಗಳೆಂದು ಅವರು 'ಮುಂಜಾವು'ಗೆ ತಿಳಿಸಿದರು.

ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕಗಳಿಗೆ 2 ತಂಡಗಳಲ್ಲಿ ನಾಯಕರು ಪ್ರವಾಸ ಹೊರಟಿದ್ದು ಇಲ್ಲಿನ ತಂಡದಲ್ಲಿ ಹಾಸನ ಜಿಲ್ಲೆಯ ಒಬ್ಬ ಹಿರಿಯ ಮುಕುಂದ ಗಣೇಶರಾವ್ ಅವರೂ ಇದ್ದರು. ಎಲ್ಲ ಕಡೆ ಕಾರ್ಯಕರ್ತರು ಉತ್ಸಾಹದಿಂದಿದ್ದು, ತಮ್ಮ ಸ್ವಂತ ಕಾಲ ಮೇಲೆ ನಿಂತು ಪಕ್ಷ ಕಟ್ಟುವತ್ತ ಒಲವು ಹೊಂದಿದ್ದಾರೆಂದು ಮಲ್ಲಿಕಾರ್ಜುನಯ್ಯ ಹೇಳಿದರು.

ಹೊಸ ಶಿಕ್ಷಣ ಕಾನೂನಿಗೆ ಬೆಂಬಲ

ರಾಜ್ಯ ಸರ್ಕಾರದ ಈಚಿನ ಹೊಸ ಶಿಕ್ಷಣ ಕಾನೂನು ಒಳ್ಳೆಯ ಉದ್ದೇಶದಿಂದ ಕೂಡಿದ್ದೆಂದ ಮಲ್ಲಿಕಾರ್ಜುನಯ್ಯ, ಇದರಿಂದ ಮಲೆನಾಡಿನಂಥ ಕೆಲವೆಡೆ ಇರುವ ಕೆಲವೇ ಕೆಲವು ಒಳ್ಳೆಯ ಶಿಕ್ಷಣ ಸಂಸ್ಥೆಗಳಿಗೆ ಸ್ವಲ್ಪ ತೊಂದರೆಯಾಗಬಹುದು. ಆದರೆ ದೊಡ್ಡ ಊರುಗಳಲ್ಲಿ ಶಾಲೆಗಳನ್ನು ನಡೆಸುವವರ ಅವ್ಯವಹಾರಗಳನ್ನು ನೋಡಿದರೆ ಇಂಥ ಕ್ರಮ ಅನಿವಾರ್ಯವಾಗಿತ್ತು ಎಂದರು.

ಸರ್ಕಾರಿ ನೌಕರರ ವಯೋಮಿತಿ

ಸ್ಟೈಪೆಂಡರಿ ನೌಕರರ ಪ್ರಶ್ನೆಯನ್ನು ಬೇಗನೇ ಬಗೆಹರಿಸಬೇಕು ಎಂದು ಅವರು ಹೇಳಿದಾಗ, 'ಮುಂಜಾವು' ಎತ್ತಿದ ಪ್ರಶ್ನೆಗೆ ಅವರು ಪ್ರತಿಕ್ರಿಯಿಸಿ, ಹೀಗೆ ದೊಡ್ಡ ಸಂಖ್ಯೆಯಲ್ಲಿ ಸರ್ಕಾರದಲ್ಲಿ ಉದ್ಯೋಗಾವಕಾಶ ಸೃಷ್ಟಿಯಾಗುವುದಕ್ಕೆ ನೌಕರರ ವಯೋಮಿತಿಯನ್ನು 55 ರಿಂದ 58 ಕ್ಕೆ ಏರಿಸಿದ್ದು ದೊಡ್ಡ ಅಡ್ಡಿಯಾಯಿತು ಎಂಬುದನ್ನು ಒಪ್ಪಿಕೊಂಡರು. ಆದರೂ ಒಂದು ಮಾನವೀಯ ಅನುಕಂಪದ ದೃಷ್ಟಿಯಿಂದ ಈ ಸ್ಟೈಪೆಂಡರಿಗಳನ್ನೆಲ್ಲ ಯಾವುದಾದರೂ ರೀತಿಯಲ್ಲಿ ಬೇಗನೆ ಕೆಲಸಕ್ಕೆ ತೆಗೆದುಕೊಳ್ಳಬೇಕು ಎಂದು ಪುನರುಚ್ಚರಿಸಿದರು.

ಮಲೆನಾಡಿಗೆ ಮುಂಗಾರು ಆಗಮನ

ಕೊಪ್ಪ; ಮುಂಗಾರು ಮಳೆ ಮಲೆನಾಡು ಸೀಮೆಗೆ ಪ್ರವೇಶ ಮಾಡಿದೆ. ಶೃಂಗೇರಿ, ಕೊಪ್ಪ, ತೀರ್ಥಹಳ್ಳಿ ತಾಲ್ಲೂಕುಗಳ ಎಲ್ಲೆಡೆ ಮಳೆ ಹನಿಯತೊಡಗಿದೆ, ಮೋಡ ಪಟ್ಟಿಸಕೊಡಗಿದೆ. ಆದರೆ ಮಳೆಯ ರಭಸ ಇನ್ನೂ ಆರಂಭವಾಗಬೇಕಿದೆ.

1982-83ರ ಬೇಸಿಗೆ ಸಂಪೂರ್ಣ 'ಒಣ ಬೇಸಿಗೆ'ಯಾಗಿ, ಮಲೆನಾಡಿನ ಎಲ್ಲಾ ಕಡೆ ರೈತರು ಕಂಡು ಕೇಳಿಲ್ಲದ ಕಷ್ಟ-ನಷ್ಟ ಅನುಭವಿಸಬೇಕಾಯಿತು. ಆದರೆ, ಕಳೆದ ವರ್ಷದ ಇಡೀ ಬೇಸಿಗೆಯಲ್ಲಿ ಮಳೆ ತಪ್ಪಿರಲೇ ಇಲ್ಲ. ಪ್ರತಿ ತಿಂಗಳೂ ಮಳೆ ಆಗುತ್ತಲ್ಲದೆ, ಯಾವ ಪ್ರದೇಶವನ್ನೂ ಬಿಡದೆ ಎಲ್ಲ ಕಡೆ ಚೆನ್ನಾಗಿ ಮಳೆಯಾಗಿತ್ತು. ಕೆಲವೆಡೆ ತಗ್ಗಿನ ಜಮೀನುಗಳಿಗೆ ಕೆಲವು ಸಂದರ್ಭಗಳಲ್ಲಿ ಮಳೆ ಹೆಚ್ಚಾದದ್ದೂ ಉಂಟು.

ಆದರೆ ಈ ಸಲದ ಬೇಸಿಗೆ ಪುನಃ ಕೆಟ್ಟ ಬೇಸಿಗೆಯಾಯಿತು. ಏಪ್ರಿಲ್-ಮೇ ನಡುವೆ ಎರಡು-ಮೂರು ಮಳೆ ಆಯಿತಾದರೂ ಎಲ್ಲ ಕಡೆ ಮಳೆಯಾಗಿಲ್ಲ. ಹಾಲ್ಮುತ್ತೂರು, ಕಮ್ಮರಡಿ, ನಿಲುವಾಗಿಲು, ಮುಂತಾದ ಪ್ರದೇಶಗಳಲ್ಲಂತೂ ಇಡೀ ಬೇಸಿಗೆಯಲ್ಲಿ ಒಂದು ಮಳೆಯೂ ಬೀಳಲಿಲ್ಲ. ಶೃಂಗೇರಿ ತಾಲ್ಲೂಕಿನ ಕೆಲವೆಡೆ ಮಾತ್ರ ಸ್ವಲ್ಪ ಒಳ್ಳೆಯ ಮಳೆಯಾಯಿತು. ಆದರೆ ಅನಂತರದ ಅವಧಿಯಲ್ಲಿ ಪುನಃ ಮಳೆ ಹೋಗಿ ರೈತರಿಗೆ ಆತಂಕಕ್ಕೆಡೆಯಾಗಿತ್ತು.

ಈ ಹಿನ್ನೆಲೆಯಲ್ಲಿ ಮುಂಗಾರಿನ ಆಗಮನ ಬಹಳ ನಿರೀಕ್ಷೆ ಹುಟ್ಟಿಸಿತಾದರೂ ಆತಂಕ, ಅನಿಶ್ಚಿತತೆ ಇನ್ನೂ ಹೋಗಿಲ್ಲ. ಕೆಲವರಂತೂ "ಈ ವರ್ಷ ಮಳೆ ಯಾಕೋ ಕೈ ಕೊಡುವ ಹಾಗೆ ಕಾಣುತ್ತೆ" ಎಂದು ಈಗಾಗಲೇ ನಿರಾಸೆ, ಅನುಭವ ವ್ಯಕ್ತಪಡಿಸತೊಡಗಿದ್ದಾರೆ.

ಅಂತೂ ಮಳೆ ಹಿಡಿದಿದೆ. ಆದರೆ ಈ ಅಸ್ತವ್ಯಸ್ತತೆಯಾದರೂ ಜನರಿಗೆ ಒಂದಿಷ್ಟು ಪರಿಸರ ರಕ್ಷಣೆಯ ಪ್ರಜ್ಞೆ ತಂದುಕೊಟ್ಟೀತೋ ಹೇಗೋ-ಕಾದು ನೋಡಬೇಕು.

ಶಿವಮೊಗ್ಗ ಅಡಿಕೆ ಪೇಟೆ

ತಾರೀಕು: 2-6-1985

ಸರಕು:	2760 – 3030
ಬೆಟ್ಟೆ:	2260 – 2429
ಗೊರಬಲು:	1300 – 1821

ಸಕಲೇಶಪುರ ಏಲಕ್ಕಿ ಧಾರಣೆ

ವ್ಯಾಪಾರದ ತಾರೀಕು	ಗರಿಷ್ಠ ಧಾರಣೆ	ಸರಾಸರಿ ಧಾರಣೆ
21.5.85	262	204
22.5.85	197	133
23.5.85	306	132
24.5.85	316	169

ಬಸರಿಕಟ್ಟೆಯಲ್ಲಿ ಮತ್ತೆ ಗಲಾಟೆ

ಬಸರಿಕಟ್ಟೆ: ಈಚಿನ ಕೆಲವು ತಿಂಗಳುಗಳಿಂದ ಇಲ್ಲ ಹಲ್ಲೆ, ಘಳತದ ಪ್ರಕರಣಗಳು ಹೆಚ್ಚುತ್ತಿದ್ದು, ಮೇ 26 ರಂದು ಇಂಥದೇ ಇನ್ನೊಂದು ಗಲಾಟೆ ನಡೆದಿರುವುದಾಗಿ ತಿಳಿದುಬಂದಿದೆ.

ಶೇಷಪ್ಪ, ಸಾಧುಶೆಟ್ಟಿ, ರತ್ನಪ್ಪ ಎಂಬವರು ಗಾಯಗೊಂಡಿದ್ದು, ಈ ಸಂಬಂಧ ಪಲ್ಲಿ ಜಗದೀಶ್, ಶ್ರೀಕಂಠ ಭಂಡಾರಿ ಎಂಬವರ ಮೇಲೆ ಪೋಲೀಸರು ಮೊಕದ್ದಮೆ ದಾಖಲು ಮಾಡಿದ್ದಾರೆನ್ನಲಾಗಿದೆ.

ಅಧಿಕಾರಿಗಳಿರದ ಕಚೇರಿಗಳು

(ನಮ್ಮ ವಿಶೇಷ ಪ್ರತಿನಿಧಿಯಿಂದ)

ಈಚಿನ ದಿನಗಳಲ್ಲಿ ಕೊಪ್ಪದ ಅನೇಕ ಕಚೇರಿಗಳಲ್ಲಿ ಮುಖ್ಯ ಅಧಿಕಾರಿಗಳ ಗೈರು ಹಾಜರಿ ಬಹಳವಾಗಿ ಕಾಣಿಸುತ್ತಿದೆ.

ಕ್ಷೇತ್ರದ ಸಚಿವರ ಪ್ರವಾಸ ಕಾಲದಲ್ಲಿ ತಹಸೀಲ್ದಾರ್, ಬಿ.ಡಿ.ಒ., ಲೋಕೋಪಯೋಗಿ ಇಲಾಖೆಯ ಇಂಜಿನಿಯರು, ಎ.ಇ.ಒ., ವೈದ್ಯಾಧಿಕಾರಿಗಳು, ಹೀಗೆ ಎಲ್ಲಾ ಪ್ರಮುಖ ಅಧಿಕಾರಿಗಳೂ ಹೋಗುತ್ತಿರುವುದರಿಂದ ಹಳ್ಳಿಯಿಂದ ಕಚೇರಿಗಳಿಗೆ ಬರುವ ರೈತರಿಗೆ ಬಹಳ ತೊಂದರೆಯಾಗಿದೆ.

ಸಚಿವರ ಜೊತೆಗೆ ಹೀಗೆ ಎಲ್ಲ ಅಧಿಕಾರಿಗಳೂ ಹೋಗುವುದರಿಂದ ಅಲ್ಲಿ ಅನೇಕ ಸಮಸ್ಯೆಗಳು ಬಗೆಹರಿಯಬಹುದು. ಆದರೆ ಇಲ್ಲಿ ಕಚೇರಿಯ ಗತಿ?

ಆದ್ದರಿಂದ ಒಂದು ಸಲಹೆಯೆಂದರೆ, ಹೀಗೇನಾದರೂ ಎಲ್ಲಾ ಅಧಿಕಾರಿಗಳು ಪ್ರವಾಸ ಹೋಗುವುದಿದ್ದಲ್ಲಿ ಒಂದು ಹೊತ್ತು ಬೆಳಿಗ್ಗೆ 10 ರಿಂದ 1 ಗಂಟೆವರೆಗೆ ಕಚೇರಿಯಲ್ಲಿದ್ದು ಅನಂತರ ಪ್ರವಾಸ ಕಾರ್ಯಕ್ರಮ ಹಾಕಿಕೊಳ್ಳಬಹುದು. ಸಚಿವರೂ ಇತ್ತ ಗಮನಹರಿಸುತ್ತಾರೆಂದು ಜನರು ಆಶಿಸುತ್ತಾರೆ.

ಗಬ್ಬೆದ್ದ ಕೊಪ್ಪದ ಕಲ್ಯಾಣ ಮಂಟಪ ರಸ್ತೆ

ಕೊಪ್ಪ: ಇಲ್ಲಿನ ರಸ್ತೆಗಳಲ್ಲಿ ಅಲ್ಲಲ್ಲಿ ಗಬ್ಬು ಹೊಡೆಯುವ ತಾಣಗಳಿದ್ದು, ಶುದ್ಧ ಗಾಳಿಯ ಒಂದೇ ರಸ್ತೆ ಎನ್ನಬಹುದಾಗಿದ್ದ ಕಲ್ಯಾಣ ಮಂಟಪದ ರಸ್ತೆ ಕೂಡ ಈಚೆಗೆ ಗಬ್ಬು ನಾರತೊಡಗಿದೆ. ಕಲ್ಯಾಣ ಮಂಟಪದ ಅಡಿಗೆ ಮನೆಯ ತೊಳೆಕಲು ನೀರನ್ನು ರಸ್ತೆ ಬದಿಗೆ ಬಿಡಲು ತೊಡಗಿರುವುದೇ ಈ ದುರ್ನಾತಕ್ಕೆ ಕಾರಣವಾಗಿದೆ.

ಸುಮಾರು 1 ತಿಂಗಳ ಹಿಂದೆ ಇದೇ ರೀತಿ ಕೊಳಕು ನೀರನ್ನು ಬಿಟ್ಟಾಗ ಸುತ್ತಮುತ್ತಲವರ ದೂರಿನ ಮೇರೆಗೆ ಪುರಸಭೆಯ ನೈರ್ಮಲ್ಯ ವಿಭಾಗದವರಲ್ಲಿ ವಿಚಾರಿಸಿದಾಗ ಅವರು ಪರಿಶೀಲನೆ ನಡೆಸಿದ್ದರು. ಅಡಿಗೆ ಮನೆಯ ನೀರು ರಸ್ತೆಗೆ ಬರದಂತೆ ಹಿಂಭಾಗದಲ್ಲೇ ಬೇರೆ ಕಡೆ ಹೋಗಲು ವ್ಯವಸ್ಥೆಯದ್ದು. ಯಾರೋ ಗೊತ್ತಿಲ್ಲದೆ ಈ ಕಡೆಗೆ ನೀರು ಬಿಟ್ಟಿದ್ದರೆಂದು ಸಮಜಾಯಿಷಿ ನೀಡಲಾಗಿತ್ತು. ಅನಂತರ ಕೆಲವು ದಿನ ದುರ್ನಾತ ನಿಂತಿತ್ತು.

ದೇಶ ಕಟ್ಟಲು ಯುವಜನ ಮುಂದಾಗಬೇಕು

ಉತ್ತಮೇಶ್ವರ: ದೇಶ ಕಟ್ಟುವ ಕಾರ್ಯದಲ್ಲಿ ಯುವಜನತೆ ಧೈರ್ಯದಿಂದ ಮುನ್ನುಗ್ಗಬೇಕು. ಹಿರಿಯರು ಅಂಥ ಉತ್ಸಾಹಿಗಳಿಗೆ ಮಾರ್ಗದರ್ಶನ ನೀಡಬೇಕು. ಜನತೆ ಎಲ್ಲ ಕೆಲಸಕ್ಕೂ ಸರ್ಕಾರದ ನೆರವನ್ನು ಕಾದು ಕೂರದೆ ಆದಷ್ಟು ಸ್ವಯಂ ಶಕ್ತಿಯಿಂದ ಗ್ರಾಮದ ಕೆಲಸ ಮಾಡಿಕೊಳ್ಳಬೇಕು. ಜನತೆಯೊಂದಿಗೆ ಸಹಕರಿಸಬೇಕು-ಎಂದು ಮಂತ್ರಿ ಗೋವಿಂದ ಗೌಡರು ಈಚೆಗೆ ಇಲ್ಲಿಗೆ ಸಮೀಪದ ಬೆಳಗೊಳದ ಆಂಜನೇಯ ಯುವಕ ಸಂಘ ಮತ್ತು ಸರಸ್ವತಿ ಮಹಿಳಾ ಸಮಾಜದ ವಾರ್ಷಿಕೋತ್ಸವದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡುತ್ತ ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಕೆ.ಎಸ್. ಕಾಡಪ್ಪ ಗೌಡರು ಯುವಜನ ಸಂಘಗಳು ಸರಿಯಾಗಿ ಚಟುವಟಿಕೆ ನಡೆಸಲು ಅನುಕೂಲವಾಗುವಂತೆ ಸರ್ಕಾರದ ಅನುದಾನ ಸಕಾಲದಲ್ಲಿ ಸಿಗುವ ಹಾಗೆ ಮಂತ್ರಿಗಳು ಗಮನಹರಿಸಬೇಕೆಂದರು.

ಕೊಪ್ಪದ ತಹಸೀಲ್ದಾರ್, ಸಹಾಯಕ ಕೃಷಿ ನಿರ್ದೇಶಕರು, ಸರ್ಕಾರಿ ವೈದ್ಯಾಧಿಕಾರಿಗಳು ಮತ್ತು ಶಾಲಾ ತನಿಖಾಧಿಕಾರಿಗಳು ಮುಖ್ಯ ಅತಿಥಿಗಳಾಗಿದ್ದರು.

ಬಿ. ಆರ್. ಸುಬ್ರಮಣ್ಯ ಸ್ವಾಗತಿಸಿ, ಬಿ. ಎಂ. ರಂಗಪ್ಪ ವಂದಿಸಿದರು. ಯುವಕ ಸಂಘ, ಮಹಿಳಾ ಸಮಾಜಗಳವರಿಂದ ಮನರಂಜನಾ ಕಾರ್ಯಕ್ರಮಗಳು ನಡೆದವು.

(ವರದಿ: ಕೆ. ರಮೇಶ್.)

ಚಿಕ್ಕಮಗಳೂರಿಗೆ ಕೆಎಸ್ಎಫ್‌ಸಿ ಶಾಖೆ

ಚಿಕ್ಕಮಗಳೂರು: ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ (ಕೆ.ಎಸ್.ಎಫ್.ಸಿ.) ಚಿಕ್ಕಮಗಳೂರಿನಲ್ಲಿ ಒಂದು ಪ್ರತ್ಯೇಕ ಶಾಖೆ ತೆರೆದಿದ್ದು, ಮಲ್ಲಂದೂರು ಸರ್ಕಲ್‌ನಲ್ಲಿರುವ ಕುಶಲ ಕೈಗಾರಿಕಾ ತರಬೇತಿ ಕೇಂದ್ರದಲ್ಲಿ ಅದು ಕಾರ್ಯಾರಂಭ ಮಾಡಿದೆ. ಸಿ. ರವೀಂದ್ರನಾಥ್ ಶಾಖಾ ಮ್ಯಾನೇಜರ್ ಆಗಿದ್ದಾರೆ. ಈವರೆಗೆ ಚಿಕ್ಕಮಗಳೂರು ಜಿಲ್ಲೆ ಶಿವಮೊಗ್ಗ ಶಾಖೆಯ ವ್ಯಾಪ್ತಿಗೆ ಸೇರಿತ್ತು.

ಈ ಶಾಖೆ ಹೊಸ ಕೈಗಾರಿಕೆ ಸ್ಥಾಪನೆಗಾಗಲಿ, ಇರುವ ಕೈಗಾರಿಕೆಯ ನವೀಕರಣಕ್ಕಾಗಲಿ 1 ಲಕ್ಷ ರೂ. ವರೆಗೆ ಸಾಲವನ್ನು ಮಂಜೂರು ಮಾಡುವ ಅಧಿಕಾರವ್ಯಾಪ್ತಿ ಹೊಂದಿದೆ. ಅದಕ್ಕಿಂತ ಹೆಚ್ಚಿನ ಮೊತ್ತದ ಸಾಲದ ಬಗ್ಗೆ ಇಲ್ಲಿ ಮಾರ್ಗದರ್ಶನ ದೊರಕುವುದಲ್ಲದೆ ಅಂಥ ಅರ್ಜಿಗಳನ್ನು ಸ್ವೀಕರಿಸಿ ಮೇಲ್ಪಟ್ಟ ಕಚೇರಿಗೆ ರವಾನಿಸಲಾಗುವುದು. ಅಲ್ಲದೆ, ಸಾಲದ ಕಂತುಗಳ ಮರುಪಾವತಿ ಸ್ವೀಕರಿಸುವುದು ಅಥವಾ ಪುನರ್ ಹೊಂದಾಣಿಕೆ ಮಾಡಿಕೊಡುವುದು ಸಹ ಇಲ್ಲಿ ನಡೆಯುತ್ತದೆ.

ಕಿರಿಯ ಶಾಲೆಗಳಲ್ಲಿ ಇಂಗ್ಲಿಷ್ ಮಾಧ್ಯಮ: ಪ್ರತಿಕ್ರಿಯೆಗಳು

(ಹಿಂದಿನ ಸಂಚಿಕೆಯಿಂದ ಮುಂದುವರಿದು)

ಪ್ರತಿಕ್ರಿಯೆ-3

ಮಾನ್ಯ ಸಂಪಾದಕರೆ,

ಇಂಗ್ಲಿಷ್ ಮಾಧ್ಯಮವನ್ನು ಕುರಿತು 'ವೇದಿಕೆ'ಯಲ್ಲಿ ಈಗಾಗಲೇ ಹಲವು ದೃಷ್ಟಿಕೋನದಿಂದ ಚರ್ಚಿಸಿದ್ದೀರಿ. 'ಕನ್ನಡ ನಾಡಿನಲ್ಲಿ ಕನ್ನಡವೇ ಮಾಧ್ಯಮವಾಗಬೇಕು', 'ಮಾತೃಭಾಷೆಯಲ್ಲಿಯೇ ಮಕ್ಕಳು ಶಿಕ್ಷಣವನ್ನು ಪಡೆಯಬೇಕು' ಇತ್ಯಾದಿ ಘೋಷಣೆಗಳು ನಮ್ಮನ್ನಾಳಲು ಶುರುಮಾಡಿ ಬಹಳ ವರ್ಷಗಳೇ ಕಳೆದಿವೆ. ಈಗ ಮತ್ತೆ ಅದು ಸಮಸ್ಯೆಯಾಗಿ ಕಾಡಲು 'ದಾಸಮಠ'ದವರ ತೀರ್ಮಾನ ಕಾರಣವಲ್ಲ. ಸರಕಾರ ಇದುವರೆಗೆ ಅನುಸರಿಸಿಕೊಂಡು ಬಂದ ದ್ವಿಮುಖ ಶೈಕ್ಷಣಿಕ ನೀತಿ ಕಾರಣವಾಗಿದೆ. ನೀವೇ ತಿಳಿಸಿದಂತೆ ಜಾತಿ-ಭಾಷೆ ಇತ್ಯಾದಿ ಅಲ್ಪಸಂಖ್ಯಾತ ಆಧಾರಗಳ ಮೇಲೆ ಇಂಗ್ಲಿಷ್ ಮಾಧ್ಯಮದ ಶಾಲೆಗಳಿಗೆ ಸರಕಾರ ಪರವಾನಿಗೆ ನೀಡಿದೆ, ನೀಡುತ್ತಿದೆ. ಅಲ್ಲಿಗೆ ಸಮಸ್ಯೆ ಮುಗಿಯುವುದಿಲ್ಲ; ಅಂತಹ ಶಾಲೆಗಳಿಗೆ ಯಾವ ಭಾಷೆ ಅಥವಾ ಮತದವರು ಬೇಕಾದರೂ ತಮ್ಮ ಮಕ್ಕಳನ್ನು (ಹಣಕೊಟ್ಟು) ಸೇರಿಸಬಹುದು. 'ಅಲ್ಪಸಂಖ್ಯಾತ' ಸಬೂಬು ಲೈಸೆನ್ಸ್ ಪಡೆಯಲು ಹೊರತು ಮಕ್ಕಳನ್ನು ಸೇರಿಸಿಕೊಳ್ಳುವಲ್ಲಿ ಇಲ್ಲ. 'ಅಲ್ಪಸಂಖ್ಯಾತ' ಹಣೆಪಟ್ಟಿಯೂ ಕೂಡ ಒಂದು ನಾಟಕ. ಸಂಗಮೇಶ್ವರ ಪೇಟೆಯ ಸಂಸ್ಥೆ ಯಾವ ಅಲ್ಪಸಂಖ್ಯಾತರದು? ತಾಂತ್ರಿಕ, ವೈದ್ಯಕೀಯ ಶಿಕ್ಷಣ ಪ್ರವೇಶಕ್ಕೆ ಮತ್ತು ಐ. ಎ. ಎಸ್. ಮುಂತಾದ ಉನ್ನತ ಹುದ್ದೆಗಳಿಗೆ ಇಂಗ್ಲಿಷ್ ಭಾಷೆಯನ್ನೇ ಒಂದು ಮಾನದಂಡವಾಗಿ ಉಳಿಸಿಕೊಂಡಿರುವ ರೀತಿ ಯಾವ ಪ್ರಾದೇಶಿಕ ಭಾಷೆಯ ಬಗ್ಗೆ ಗೌರವವಿರುವ ನೀತಿ? ಈ ಹಂತದಲ್ಲಿ ಇಂಗ್ಲಿಷ್ ಮಾಧ್ಯಮ ಪ್ರತಿಷ್ಠೆಯ ಪ್ರದರ್ಶನ ಮಾತ್ರವಲ್ಲ ಪ್ರತಿಷ್ಠಿತವರ್ಗ ತಮ್ಮ 'ವರ್ಗಹಿತ'ಕ್ಕಾಗಿ ಉಳಿಸಿಕೊಂಡ ಸಾಧನ.

'ದಾಸಮಠ'ದ ಮುಖಂಡರು ಒಂದು ವೇಳೆ ಶಿಕ್ಷಣಸಂಸ್ಥೆಯನ್ನು ತೆರೆಯದಿದ್ದರೂ ಈ ಪ್ರತಿಷ್ಠಿತ ವರ್ಗಕ್ಕೇನೂ ನಷ್ಟವಿಲ್ಲ. ಆ ವರ್ಗದ ಜನ ತಮ್ಮ ಮಕ್ಕಳನ್ನು ಸಂಗಮೇಶ್ವರ ಪೇಟೆಗೋ ಊಟಿಗೋ ಕಳುಹಿಸಿ ಓದಿಸುತ್ತಾರೆ. ಹೀಗಾಗಿ ಈ 'ವರ್ಗಹಿತ'ದ ಸಾಧನದಿಂದ ವಂಚಿತರಾಗುವುದು ಗ್ರಾಮೀಣ ಕೆಳವರ್ಗದ ಮಕ್ಕಳು ಮಾತ್ರ. ಸಾರ್ವಜನಿಕ ಸರಕಾರಿ ಶಾಲೆಗಳಿಗೆ ಪರ್ಯಾಯವಾದ ಶೈಕ್ಷಣಿಕ ವ್ಯವಸ್ಥೆಯೊಂದಕ್ಕೆ ಅವಕಾಶವಿರುವ ಮತ್ತು ಅಂತಹ ವ್ಯವಸ್ಥೆ ರಾಜ್ಯದಲ್ಲಿ ಅಸ್ತಿತ್ವದಲ್ಲಿರುವ ತನಕವೂ ಗ್ರಾಮೀಣ ಕೆಳವರ್ಗದ ಮಕ್ಕಳ ಸ್ಥಿತಿ ಸುಧಾರಣೆಯಾಗುವುದಿಲ್ಲ. 'ದಾಸಮಠ'ದವರು ತೆರೆಯಬಹುದಾದ ವಿದ್ಯಾಸಂಸ್ಥೆ ಗ್ರಾಮೀಣ ಕೆಳವರ್ಗದ ಮಕ್ಕಳ ಪ್ರವೇಶಕ್ಕೆ ಆದ್ಯತೆ ನೀಡಲಿ ಎಂದು ಕೇಳಿಕೊಳ್ಳುವುದು ಮಾತ್ರ ಇಲ್ಲಿ ಮೊದಲ ಕರ್ತವ್ಯವೆನಿಸುತ್ತದೆ.

ಕನ್ನಡ ಮಾಧ್ಯಮದ ಜೊತೆಗೆ ಆರಂಭದಿಂದಲೇ ಇಂಗ್ಲಿಷ್ ಭಾಷೆಯನ್ನು ಉತ್ತಮವಾಗಿ ಬೋಧಿಸುವ ವ್ಯವಸ್ಥೆ—ಇದು ಎಲ್ಲಾ ವಿದ್ಯಾ ಸಂಸ್ಥೆಗಳಿಗೂ, ಸರಕಾರಿ ಶಾಲೆಗಳಿಗೂ ಅನ್ವಯಿಸುವ ಸೂತ್ರವಲ್ಲವೆ? ಇನ್ನೊಂದು ಸಂಗತಿಯನ್ನು ಇಲ್ಲಿ ಪ್ರಸ್ತಾಪಿಸಬಹುದೇನೋ. ಸರ್ಕಾರವು ಖಾಸಗಿ ಶಿಕ್ಷಣ ಸಂಸ್ಥೆಗಳ ವ್ಯವಸ್ಥೆಗೆ ಪ್ರೋತ್ಸಾಹ ಏಕೆ ನೀಡುತ್ತಿದೆ ಹೇಳಿ? ಶಿಕ್ಷಣವನ್ನು ವ್ಯಾಪಾರದ ಸರಕನ್ನಾಗಿಸಿಕೊಂಡವರು ಎಂದು ಟೀಕಿಸುವ ಜನರೇ ತಮ್ಮ ಮಕ್ಕಳನ್ನು ಇಂತಹ ಶಿಕ್ಷಣ ಸಂಸ್ಥೆಗಳಿಗೇ ಕಳುಹಿಸಲು ಕಾರಣವೇನು? ಸರಕಾರಿ ಶಾಲೆಗಳಿಗೆ ಸೇರಿಸುವಾಗ ತಮ್ಮ ಮಕ್ಕಳನ್ನು ಸೇರಿಸಿ ಅನಂತರ ಅವರ ಭವಿಷ್ಯದ ಬಗ್ಗೆ ಆತಂಕಗೊಳ್ಳುತ್ತಿರುವ ತಂದೆ ತಾಯಿಯರ ಯಾತನೆಯ ಬಗ್ಗೆ ಯಾರಿಗೂ ಏನೂ ಅನ್ನಿಸುವುದಿಲ್ಲವೇಕೆ? (ಇಂತಹ ಆತಂಕಗಳ ಪೋಷಕನಾಗಿ ನೋವಿನಿಂದ ಹೀಗೆ ಬರೆಯುತ್ತಿದ್ದೇನೆ.) ಸರಕಾರ ತಾನು ನಡೆಸುತ್ತಿರುವ ಶೈಕ್ಷಣಿಕ ವ್ಯವಸ್ಥೆಗೆ ಪರ್ಯಾಯ ವ್ಯವಸ್ಥೆಯೊಂದನ್ನು ಹುಟ್ಟುಹಾಕಿ ಒಂದು ವರ್ಗದವರ ಹಿತವನ್ನು ಮಾತ್ರ ಪೋಷಿಸುತ್ತದೆ ಎನಿಸಿದರೆ ತಪ್ಪೆ? ಸರಕಾರಿ ಸಾರ್ವಜನಿಕ (ಮುಖ್ಯವಾಗಿ ಕೆಳವರ್ಗದವರ) ಶಾಲೆಗಳಿಗೆ ಕಾಯಕಲ್ಪ ಆಗುವವರೆಗೂ ಈ ಅಮಾನುಷ ಶಿಕ್ಷಣದ ಶಿಕ್ಷೆಯಿಂದ ಮುಕ್ತಿ ಇಲ್ಲ ಅಲ್ಲವೆ?

ಈ ಎಲ್ಲ ದೃಷ್ಟಿಯಿಂದ ನನ್ನ ಹಲವು ಮಿತ್ರರೊಡನೆ ಚರ್ಚಿಸಿ 'ದಾಸಮಠ' ಕೇವಲ ಒಂದು ದೇವಾಲಯ ಮಾತ್ರವಾಗಿರದೆ ಗ್ರಾಮೀಣ ಮಕ್ಕಳಿಗೆ ಒಳ್ಳೆಯ ಶಿಕ್ಷಣ ನೀಡಬಲ್ಲ ವಿದ್ಯಾಸಂಸ್ಥೆಯಾಗಿ ಬೆಳೆಯುವುದು ಉತ್ತಮವೆಂದು ಅಭಿಪ್ರಾಯ ಪಡುತ್ತೇನೆ. (ಇದು ತೀರ್ಮಾನವಲ್ಲ) ನೀವು ಚರ್ಚಿಸಿದ, 'ಹಿಂದೆ ಬೀಳುವ', 'ಮುಂದುವರಿಯುವ' ವಿದ್ಯಾರ್ಥಿಗಳ ಬಗ್ಗೆ ನಾನು ಏನನ್ನೂ ಹೇಳುವುದಿಲ್ಲ. ನಮ್ಮ ಶಿಕ್ಷಣಕ್ಕೆ ಅಗತ್ಯವಾಗುವಷ್ಟು ಬೌದ್ಧಿಕ ಮಟ್ಟ ಎಲ್ಲರಿಗೂ ಇರುತ್ತದೆ (ಮನೋವೈಕಲ್ಯವಿರುವ ರೋಗಿಗಳನ್ನು ಬಿಟ್ಟು). ಹಿಂದೆಬೀಳುವ ಮತ್ತು ಮುಂದುವರಿಯುವ ಹಾಗೆ ಮಾಡುವುದು ಶೈಕ್ಷಣಿಕ ಹಾಗೂ ಸಾಮಾಜಿಕ ವ್ಯವಸ್ಥೆ ಎಂದು ನನ್ನ ಎಣಿಕೆ. ಬುದ್ಧಿಶಕ್ತಿಯನ್ನು 'ಜಾತಿ' ಒರೆಗಲ್ಲಿನಲ್ಲಿ ಅಳೆಯಲು ಬರುವುದಿಲ್ಲ. ಬುದ್ಧಿಶಕ್ತಿಯ ವಿಕಸನಕ್ಕೆ ಹೊಟ್ಟೆಯ ಸಮಸ್ಯೆ ಕಡಿವಾಣ ಹಾಕುತ್ತದೆ ಎಂಬುದು ವಾಸ್ತವಿಕ ಪರಿಸ್ಥಿತಿ.

ಕೆ. ಪುಟ್ಟಯ್ಯ, ಶೃಂಗೇರಿ.

ವೇದಿಕೆ

ಪ್ರತಿಕ್ರಿಯೆ-4

ಮಾನ್ಯರೆ,

ಕೊಪ್ಪದ ದಾಸಮಠದ ಆಶ್ರಯದಲ್ಲಿ ಆರಂಭಿಸಲಾಗುತ್ತಿರುವ ವಿದ್ಯಾಸಂಸ್ಥೆಯಲ್ಲಿ ನರ್ಸರಿಯಿಂದಲೇ ಆಗಾಯ್ತು ಇಂಗ್ಲಿಷ್ ಮಾಧ್ಯಮವನ್ನು ಅಳವಡಿಸಿಕೊಳ್ಳುವ ಬಗ್ಗೆ ತೀರ್ಮಾನಿಸಿರುವುದನ್ನು ನಿಮ್ಮ ಪತ್ರಿಕೆಯಲ್ಲಿ ಓದಿ ತುಂಬಾ ಖೇದವಾಯಿತು. 'ಕನ್ನಡ ಎನೆ ಕುಣಿದಾಡುವುದೆನ್ನೆದೆ, ಕನ್ನಡ ಎನೆ ಕಿವಿ ನಿಮಿರುವುದು' ಎಂದು ಎದೆ ತುಂಬಿ ಹಾಡಿರುವ ರಾಷ್ಟ್ರಕವಿ ಕುವೆಂಪುರವರ ತವರೂರಾದ ಕೊಪ್ಪದಲ್ಲೇ ಇಂಥ ಪ್ರಯತ್ನವೊಂದು ನಡೆಯುತ್ತಿದೆಯೆಂದರೆ ಅದು ನಿಜಕ್ಕೂ ವಿಷಾದನೀಯ. ಈ ಸಂಸ್ಥೆಗೆ ಸಂಬಂಧಿಸಿದ ಕೆಲವರು ತಮ್ಮ ಪ್ರಯತ್ನದ ಸಮರ್ಥನೆಗೆ ನೀಡುವ ಕಾರಣಗಳು ತೀರ ಕ್ಷುಲ್ಲಕವಾದವುಗಳೆನ್ನಬೇಕಾಗಿದೆ.

'ಬಿ.ಇ., ಎಂ.ಬಿ.ಬಿ.ಎಸ್., ಐ.ಎ.ಎಸ್. ಮುಂತಾದ ಉನ್ನತ ಮಟ್ಟದ ಶಿಕ್ಷಣಗಳಿಗೆ ಬೇಕಾಗುವಷ್ಟು ಇಂಗ್ಲಿಷ್ ಜ್ಞಾನವನ್ನು ಸಂಪಾದಿಸಲು ನರ್ಸರಿ ಮಟ್ಟದಿಂದಲೇ ಇಂಗ್ಲಿಷ್ ಮಾಧ್ಯಮವನ್ನು ಅಭ್ಯಸಿಸಬೇಕೆಂಬು' ಅವರ ವಾದ ಹುರುಳಿಲ್ಲದ್ದು. ಈಗ ನರ್ಸರಿ ಮಟ್ಟದಿಂದ ಕನ್ನಡ ಮಾಧ್ಯಮದಲ್ಲೇ ಕಲಿತು ಎಷ್ಟೋ ಜನ ಬಿ.ಇ., ಎಂ.ಬಿ.ಬಿ.ಎಸ್., ಐ.ಎ.ಎಸ್. ಮುಂತಾದ ಉನ್ನತ ಶಿಕ್ಷಣಗಳನ್ನು ಪಡೆದು ಹಿರಿಯ ಹುದ್ದೆಗಳನ್ನಲಂಕರಿಸಿದವರಿಲ್ಲವೇ? ನರ್ಸರಿ ಮಟ್ಟದಿಂದ ಇಂಗ್ಲಿಷನ್ನೇ ಕಲಿತ ಎಷ್ಟೋ ಮಂದಿ ವಿದ್ಯಾರ್ಥಿಗಳು ಉನ್ನತ ವ್ಯಾಸಂಗವನ್ನು ಪಡೆಯುವುದರಲ್ಲಿ ವಿಫಲರಾಗಿಲ್ಲವೇ? ಕನ್ನಡ ಮಾಧ್ಯಮದ ಜೊತೆಗೆ ಇಂಗ್ಲಿಷನ್ನು ಒಂದು ಸಹಭಾಷೆಯನ್ನಾಗಿ "ವ್ಯವಸ್ಥಿತವಾಗಿ" ಬೋಧಿಸಿದರೆ ಖಂಡಿತವಾಗಿ ಮಕ್ಕಳು ಉನ್ನತ ವ್ಯಾಸಂಗಕ್ಕೆ ಬೇಕಾಗುವಷ್ಟು ಇಂಗ್ಲೀಷ್ ಜ್ಞಾನವನ್ನು ಪಡೆಯಲು ಸಾಧ್ಯವಾಗುತ್ತದೆ.

ಇನ್ನು ಮಕ್ಕಳಿಗೆ ಯಾವುದನ್ನು ಕಲಿಯಲೂ ಸಹ ಅದಕ್ಕನುಗುಣವಾದ ಪರಿಸರ (ಎನ್‌ವೈರನ್‌ಮೆಂಟ್) ಅತಿ ಮುಖ್ಯ. ನಾವು ಇಂದು ಸಾಮಾನ್ಯವಾಗಿ ಎಲ್ಲಾ ಬ್ರಾಹ್ಮಣ ಕುಟುಂಬಗಳಲ್ಲೂ ವಿದ್ಯಾವಂತ ಪರಿಸರವನ್ನು ಕಾಣುತ್ತೇವೆ. ಈ ಕುಟುಂಬಗಳಲ್ಲಿ ಮಕ್ಕಳನ್ನು ಹುಟ್ಟಿನಿಂದಲೇ ಎಂಬಂತೆ ಇಂಥ ಪರಿಸರದಲ್ಲೇ ಬೆಳೆಸಲಾಗುತ್ತದೆ. ಆದ್ದರಿಂದ ಬ್ರಾಹ್ಮಣ ಸಮುದಾಯದ ಮಕ್ಕಳು ಮುಂದೆ ವಿದ್ಯಾವಂತರಾಗಿ ಬೆಳೆಯುವುದು ಸುಲಭವಾಗಿದೆ. ಬಹುತೇಕ ಬ್ರಾಹ್ಮಣೇತರರ ಮಕ್ಕಳು ಇಂಥ ಪರಿಸರದಿಂದ ವಂಚಿತರಾಗುವುದರಿಂದ ಅವರು ಹಿಂದೆ ಬೀಳಲು ಕಾರಣವಾಗುತ್ತದೆ. ಆದುದರಿಂದ ನಾವು ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಲು ಇಂಥ ಉತ್ತಮ ಪರಿಸರವನ್ನು ನಿರ್ಮಿಸಬೇಕೇ ಹೊರತು ಬರೀ ಇಂಗ್ಲೀಷ್ ಮಾಧ್ಯಮವೊಂದನ್ನೇ ಬೋಧಿಸುವುದರಿಂದ ಮಕ್ಕಳಲ್ಲಿ ಈ ಕೊರತೆಯನ್ನು ನೀಗುತ್ತೇವೆ ಎಂದರೆ ಬಹುಶಃ ಅದು ವ್ಯರ್ಥ ಪ್ರಯತ್ನವಾದೀತು.

ಇಂಗ್ಲೀಷ್ ಮಾಧ್ಯಮದ ಶಾಲೆಯೆಂದಾಗ ಇಲ್ಲಿ ಮಕ್ಕಳನ್ನು ಓದಿಸಲು ತಗಲುವ ವೆಚ್ಚ ದುಬಾರಿಯೇ ಆಗಿರುವುದರಿಂದ ಈ ವ್ಯವಸ್ಥೆಯು ಸಾಮಾನ್ಯನಿಗೆ ಕನ್ನಡಿಯೊಳಗಿನ ಗಂಟಾಗಿಯೇ ಉಳಿಯುತ್ತದೆ. ಆರ್ಥಿಕವಾಗಿ ಮುಂದುವರಿದ ಒಂದು ವರ್ಗ ಮಾತ್ರ ಇದರ ಉಪಯೋಗವನ್ನು ಪಡೆದು ಮತ್ತೂ ಮೇಲೇರಲು ಸಾಧ್ಯವಾಗುತ್ತದೆ. ಆರ್ಥಿಕವಾಗಿ ಕೆಳಮಟ್ಟದಲ್ಲಿರುವವರಿಗೆ ಇದರಿಂದ ಏನೂ ಪ್ರಯೋಜನವಾಗುವುದಿಲ್ಲ.

ಕನ್ನಡಿಗರಲ್ಲಿ ತೀವ್ರವಾಗಿ 'ಕನ್ನಡತನ' ಮರೆಯಾಗುತ್ತಿರುವ ಇಂಥ ಪರಿಸ್ಥಿತಿಯಲ್ಲಿ ನಾವು ಈಗ ಮಕ್ಕಳಲ್ಲಿ ಮಾತೃಭಾಷೆಯ ಬಗ್ಗೆ ಹೆಚ್ಚಿನ ಒಲವನ್ನು ಮೂಡಿಸಲು ಪ್ರಯತ್ನಿಸಬೇಕೇ ಹೊರತು ಎಳೆಯ ಮಕ್ಕಳನ್ನು ಚಿಕ್ಕಂದಿನಿಂದಲೇ **ಪರಭಾಷಾ ವ್ಯಾಮೋಹದ ತೊಟ್ಟಿಲಲ್ಲೇ ತೂಗಿ ಬೆಳೆಸಿ** ಅವರಲ್ಲಿ ಕನ್ನಡತನದ ಕುಡಿಯನ್ನು ಚಿವುಟಿ ಹಾಕುವಂಥ ಪ್ರಯತ್ನ ನಡೆದರೆ ಅದು ಸರ್ವಥಾ ಖಂಡನೀಯ. ಕನ್ನಡಕ್ಕೇ ಹೆಚ್ಚಿನ ಪ್ರಾಧಾನ್ಯತೆ ನೀಡಿ ಅದರ ಜೊತೆಗೆ ಇಂಗ್ಲೀಷನ್ನು ಒಂದು ಸಹಭಾಷೆಯನ್ನಾಗಿ ಬೋಧಿಸುವ ಆಲೋಚನೆಯಿದ್ದರೆ ಅದು ಸ್ವಾಗತಾರ್ಹ.

ದಾಸಮಠದ ಆಡಳಿತ ವರ್ಗವು ಈ ದಿಸೆಯಲ್ಲಿ ಇನ್ನೊಮ್ಮೆ ಗಂಭೀರವಾಗಿ ಯೋಚಿಸಿ ಮುನ್ನಡೆಯುವುದು ತುಂಬಾ ಸೂಕ್ತ.

—ಚಾವಲ್ಮನೆ ಸುರೇಶ್ ನಾಯಕ್.

ಪ್ರತಿಕ್ರಿಯೆ-5

ಮಾನ್ಯರೆ,

ನಿಮ್ಮ 'ವೇದಿಕೆ' ಅಂಕಣದಲ್ಲಿ ನಡೆಯುತ್ತಿರುವ ಸಂವಾದದ ಹಿನ್ನೆಲೆಯಲ್ಲಿ ಇಂಗ್ಲಿಷ್ ಮಾಧ್ಯಮದ ಕುರಿತು ನಾನು ಗಮನಿಸಿದ ಒಂದು ಅಂಶವನ್ನು ಬರೆಯುತ್ತಿದ್ದೇನೆ.

ಕೆಲವೇ ಶ್ರೀಮಂತ ವರ್ಗದ ನಂಟಾದ ಇಂಗ್ಲಿಷ್ ಮಾಧ್ಯಮ ಶಾಲೆ ಬೇರೆ ಕಡೆ (ಬೆಂಗಳೂರಿನಂಥ ನಗರ-ಪಟ್ಟಣಗಳಲ್ಲಿ) ಬೆಳೆಯಲು, ಮಗುವಿಗೆ ಉತ್ತಮವಾದ ವಿದ್ಯಾಭ್ಯಾಸ ಕೊಡಿಸುವ ಉದ್ದೇಶ ಎನ್ನುವುದು ತೋರಿಕೆಗೆ ಕಾರಣವಾದರೂ ತಂದೆ-ತಾಯಿಗಳ 'ಘನತೆ' ಮತ್ತು ಅನುಕರಣೆ ನಿಜವಾಗಿ ಕಾರಣವಾಗಿದೆ.

ಬೆಂಗಳೂರಿನಲ್ಲಿರುವ ನಮ್ಮ ಬಂಧುವೊಬ್ಬರ ಮಗಳನ್ನು ಇಂಗ್ಲಿಷ್ ಮಾಧ್ಯಮಕ್ಕೆ ಸೇರಿಸಬೇಕೆಂಬುದು ಅವರ ಹಠ. ಇಲ್ಲಿ ಕನ್ನಡ ಶಾಲೆಗೆ ಹೋದರೆ ಒಂದು ರೀತಿ ನಾಚಿಕೆ (ಶೇಮ್) ಎಂದು ಅವರ ನಂಬಿಕೆ. ಅವರಿಗೆ ಇಂಗ್ಲಿಷ್ ಮತ್ತು ಘನತೆಯ ಹುಚ್ಚು ಹಿಡಿದಿರುವಂತಿದೆ. 'ಅಮ್ಮಾ'-'ಅಪ್ಪಾ' ಎಂದು ಮುದ್ದಾಗಿ ಕರೆಯಬೇಕಾಗಿದ್ದ ಆ ಮಗು 'ಮಮ್ಮಿ' 'ಡ್ಯಾಡಿ', ಎಂದು ಕರೆಯುವಾಗ ಕಷ್ಟ ಪಡುವಂತೆ ನಮಗೆ ಕಾಣುತ್ತದೆ. ಅವಳಿಂದ ಇಂಗ್ಲಿಷ್ ಆಡಿಸಿ ಸಂತೋಷಪಡುತ್ತಾರೆ.

(3ನೇ ಪುಟಕ್ಕೆ)

ಓದುಗರಲ್ಲಿ,

ಶೃಂಗೇರಿ ತಾಲ್ಲೂಕಿನ ಓದುಗರು ಯಾವುದೇ ದೂರುಗಳನ್ನು ಅಥವಾ ವಿವಾದಾತ್ಮಕ ವರದಿಗಳನ್ನು ಪತ್ರಿಕೆಗೆ ಕಳಿಸಲು ಅಪೇಕ್ಷಿಸುವುದಾದಲ್ಲಿ ಶೃಂಗೇರಿ ತಾಲ್ಲೂಕಿನ ನಮ್ಮ ಪ್ರತಿನಿಧಿ ಶ್ರೀ ಕಲ್ಕುಳ ವಿಠಲ ಹೆಗ್ಡೆ, ಶೃಂಗೇರಿ, ಇವರನ್ನು ಸಂಪರ್ಕಿಸಬೇಕು. **—ಸಂಪಾದಕ.**

ಅರಣ್ಯಾಭಿವೃದ್ಧಿ ವಿಚಾರ ಸಂಕಿರಣದಲ್ಲಿ ಕೈಗೊಂಡ ಪ್ರಮುಖ ನಿರ್ಣಯಗಳು

ತಾರೀಖು 23–5–85ರಂದು ಹರಿಹರ ಪುರದಲ್ಲಿ ನಡೆದ ಸಾಮಾಜಿಕ ಅರಣ್ಯ ಕುರಿತ ವಿಚಾರ ಸಂಕಿರಣವು 21 ನಿರ್ಣಯಗಳ ರೂಪದಲ್ಲಿ ಸರ್ಕಾರದ ಮುಂದಿಟ್ಟ ಸಲಹೆಗಳಲ್ಲಿ ಪ್ರಮುಖವಾದ ಕೆಲವನ್ನು ಇಲ್ಲಿ ಕೊಡಲಾಗಿದೆ.

(1) ಗ್ರಾಮ ಪಂಚಾಯ್ತಿಗಳು ಅಪೇಕ್ಷಿಸಿದಲ್ಲಿ ಗ್ರಾಮಾಂತರ ಪ್ರದೇಶದಲ್ಲೂ ಹೆಚ್ಚು ಹೆಚ್ಚಾಗಿ ಸೌದೆ ಡಿಪೋಗಳನ್ನು ತೆರೆಯಬೇಕು.

(2)ಸೌದೆಯ ಮಿತವ್ಯಯಕ್ಕಾಗಿ, ಕನಿಷ್ಠ 5 ಜಾನುವಾರುಗಳನ್ನು ಹೊಂದಿರುವ ಕುಟುಂಬಗಳಲ್ಲಿ ಸಗಣಿ ಅನಿಲ ಘಟಕಗಳನ್ನು ಕಡ್ಡಾಯಗೊಳಿಸಿ, ಅದಕ್ಕೆ ಅಗತ್ಯವಾದ ಸಹಾಯ ನೀಡುವುದು.

ಸಗಣಿ ಅನಿಲ ಘಟಕ ಕಟ್ಟುವಲ್ಲಿ ಬಳಕೆದಾರರು ರೂಪಿಸುತ್ತಿರುವ ಕಡಿಮೆ ವೆಚ್ಚ/ ಹೆಚ್ಚು ಕಾರ್ಯದಕ್ಷತೆ (ಎಫಿಶಿಯೆಂಟ್)ಯ ಮಾದರಿಗಳಿಗೆ ಉತ್ತೇಜನ ಕೊಡಬೇಕು, ಹಾಗೂ ಇಂಥ ಮಾದರಿಯಾಗಲಿ, ಡ್ರಂ ಮಾದರಿಯಾಗಲಿ, ವಾಸ್ತವದ ಅಂದಾಜು ಪಟ್ಟಿಯ ಪ್ರಕಾರ ಸಾಲ ಮತ್ತು ಸಬ್ಸಿಡಿ ನೀಡಬೇಕು;

ಡ್ರಂ ತಯಾರಿಕೆ ಘಟಕಗಳಿಗೆ 12 ಗೇಜಿನ ತಗಡನ್ನು ಆಯಾ ವರ್ಷದ ಬೇಡಿಕೆಗನುಗುಣವಾಗಿ ಪೂರ್ಣ ಪ್ರಮಾಣದಲ್ಲಿ ಒದಗಿಸಬೇಕು;

ಸಗಣಿ ಅನಿಲವನ್ನು ಸಿಲಿಂಡರಿಗೆ ತುಂಬುವ ದೋಷರಹಿತ ಸಮರ್ಪಕ ವಿಧಾನವನ್ನು ಅಭಿವೃದ್ಧಿ ಪಡಿಸಲು ಸಂಬಂಧಪಟ್ಟ ವಿಜ್ಞಾನ ಸಂಸಂಸ್ಥೆಗಳನ್ನು ಕೇಳಿಕೊಳ್ಳಬೇಕು.

(3) ಪರಿಸರ ಸಮತೋಲನಕ್ಕೆ ಕಾರಣವಾಗುವ ತುಂಗಾ ಮತ್ತು ಭದ್ರಾ ಮೇಲ್ದಂಡೆ ಯೋಜನೆಗಳಂತಹ ಭಾರಿ ನೀರಾವರಿ ಯೋಜನೆಗಳನ್ನು ಮಲೆನಾಡಿನಲ್ಲಿ ಅನುಷ್ಠಾನಗೊಳಿಸಬಾರದು; ಹಾಗೆಯೇ, ದೊಡ್ಡ ಪ್ರಮಾಣದಲ್ಲಿ ಕಾಡು ನಾಶವಾಗುವ ಕಾಫಿ, ಟೀ, ರಬ್ಬರ್ ಮುಂತಾದ ಪ್ಲಾಂಟೇಶನ್‌ಗಳಿಗೆ (ಹೆಚ್ಚು ಕಾಡು ನಾಶ ಮಾಡದವುಗಳಿಗಲ್ಲ)ಉತ್ತೇಜನ ಕೊಡಬಾರದು.

(4) ಗ್ರಾಮಾಂತರದಲ್ಲಿ ಅಡಿಗೆಗೆ ವಿದ್ಯುಚ್ಛಕ್ತಿ (ಎ. ಇ. ಹೆಚ್.) ಬಳಕೆಗೆ ಉತ್ತೇಜನ.

(5) ಸೌರಶಕ್ತಿ ಒಲೆಗಳ ಬಳಕೆಗೆ ಉತ್ತೇಜನ.

(6) ಅಡಿಕೆ, ಭತ್ತ, ಏಲಕ್ಕಿ, ಮುಂತಾದ ಬೆಳೆಗಳನ್ನು ಒಣಗಿಸಲು ಡ್ರೈಯರ್ ತಯಾರಿಸುವವರಿಗೆ ಸಹಾಯ ಧನ ಒದಗಿಸಬೇಕು; ಅಡಿಕೆ ಬೇಯಿಸುವ ಪ್ರೆಶರ್ ಕುಕ್ಕರ್‌ಗಳನ್ನು ಸರ್ಕಾರ ಬೆಳೆಗಾರರಿಗೆ ರಿಯಾಯ್ತಿ ದರದಲ್ಲಿ ಒದಗಿಸಿ ಸೌದೆ ದುರ್ವ್ಯಯವನ್ನು ನಿಯಂತ್ರಿಸಬೇಕು.

(7) ಕಟ್ಟಡ ನಿರ್ಮಾಣಕ್ಕೆ ಮರ ಮುಟ್ಟುಗಳ ಬದಲಿಗೆ ಯಾವುದೇ ಬದಲೀ ಸರಂಜಾಮುಗಳನ್ನು ಉತ್ತೇಜಿಸಬೇಕು.

(8) ತೆಂಗು, ಅಡಿಕೆ ಮುಂತಾದುವುಗಳ ಕಸ ಕಡ್ಡಿಗಳನ್ನು ಸೌದೆಯ ಬದಲಿಗೆ ಬಳಸಬಲ್ಲ ಒಲೆಗಳನ್ನು ಅಭಿವೃದ್ಧಿ ಪಡಿಸಬೇಕು

(9) ಅಡಿಗೆ ಅನಿಲ ಸೌಲಭ್ಯವನ್ನು ಗ್ರಾಮಾಂತರಕ್ಕೂ ಹೆಚ್ಚು ಹೆಚ್ಚಾಗಿ ವಿಸ್ತರಿಸಬೇಕು.

(10) ಅರಣ್ಯಕ್ಕೂ ಹವಾಮಾನಕ್ಕೂ ಇರುವ ಸಂಬಂಧ ಮತ್ತು ಅರಣ್ಯಕ್ಕೂ ಜನತೆಗೂ ಇರುವ ಸಂಬಂಧ ಇವುಗಳನ್ನು ಎತ್ತಿ ತೋರಿಸುವ;

ಅರಣ್ಯ ಇಲಾಖೆಯ ಅಭಿವೃದ್ಧಿ ಕಾರ್ಯಕ್ರಮಗಳು ಜನ ಸಾಮಾನ್ಯರ ಕಾರ್ಯ ಕ್ರಮಗಳು ಎಂಬ ಭಾವನೆ ಮೂಡಿಸುವ;

ಶಾಲಾ–ಮಕ್ಕಳಿಗೆ ಅರಣ್ಯದ ಬಗ್ಗೆ ಮಮತೆ, ಆಸಕ್ತಿ ಮೂಡಿಸುವ—

ಪ್ರಚಾರ ಕಾರ್ಯವನ್ನು ಉತ್ತಮವಾದ ಚಲನಚಿತ್ರ ಮತ್ತಿತರ ಮಾಧ್ಯಮಗಳ ಮೂಲಕ ಪರಿಣಾಮಕಾರಿಯಾಗಿ ಮಾಡಬೇಕು.

(11) ಪ್ರತಿ ವರ್ಷ ಬೀಳುವ ಬೆಂಕಿಯಿಂದ ಕಾಡು ನಾಶವಾಗುವುದನ್ನು ತಡೆಗಟ್ಟಲು ಕಡೇ ಪಕ್ಷ ಪ್ರತೀ ಅರಣ್ಯ ವಿಭಾಗದಲ್ಲಿ ಒಂದೊಂದು ಅಗ್ನಿ ಶಾಮಕದಳವನ್ನು ಒದಗಿಸಬೇಕು.

(12) ಜಮೀನಿನ ಪಕ್ಕದಲ್ಲಿ ಸರ್ಕಾರಿ ಜಾಗದಲ್ಲಿರುವ ಅರಣ್ಯದ ಕಿರು ಉತ್ಪನ್ನಗಳನ್ನು ಬಳಸುವ 'ಕುಮ್ಕಿ' ಹಕ್ಕನ್ನು ಹಿಡುವಳಿದಾರರಿಗೆ ನೀಡಬೇಕು.

(13) ಮಲೆನಾಡಿನ ಹವಾಮಾನ ಮತ್ತು ಮಣ್ಣಿಗೆ ಹೊಂದುವಂಥಹ ಜಾತಿಯ ಮರ ಗಿಡಗಳನ್ನು ಗುರುತಿಸಿ ಅಂಥವನ್ನು ಹೆಚ್ಚು ಬೆಳೆಸಲು ಪ್ರೋತ್ಸಾಹಿಸಬೇಕು.

(14) ಪ್ರತೀ ಗ್ರಾಮ ಪಂಚಾಯಿತಿಯೂ ಕನಿಷ್ಠ 2 ಎಕರೆ ಪ್ರದೇಶದಲ್ಲಿ ಗಿಡ ಮೂಲಿಕೆ ಪ್ರಧಾನವಾದ ತೋಟಗಳನ್ನು ಕಡ್ಡಾಯವಾಗಿ ಬೆಳೆಸಲು ಸರ್ಕಾರದಿಂದ ಒತ್ತಾಯ ಮತ್ತು ಉತ್ತೇಜನ ಇರಬೇಕು.

ಅರಣ್ಯ ಇಲಾಖೆಯ ಸೌಲಭ್ಯಗಳ ನೀಡಿಕೆಯಲ್ಲಿ ಸಂತತಿ ನಿಯಂತ್ರಣವನ್ನು ಪಾಲಿಸಿದವರಿಗೆ ಅತಿ ಹೆಚ್ಚಿನ ಆದ್ಯತೆ ಕೊಡಬೇಕು.

(15) ಈ ಸಭೆಯ ನಿರ್ಣಯಗಳ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳನ್ನು ಸಭೆಯಲ್ಲಿ ಪಾಲ್ಗೊಂಡ ಎಲ್ಲಾ ಪ್ರತಿನಿಧಿಗಳು ಮತ್ತು ಆಹ್ವಾನಿತರಿಗೆ ಅತಿ ಶೀಘ್ರದಲ್ಲಿ ತಿಳಿಸಬೇಕು.

ಸಂಕಿರಣದಲ್ಲಿ ಚರ್ಚೆಯಾಗಿ ನಿರ್ಣಯದಲ್ಲಿ ಬಿಟ್ಟು ಹೋದ ಕೆಲವು ವಿಷಯಗಳು:

(1)ಜಮೀನಿನ ಬೇಲಿಯ ಮುಂದುಗಳಿಗಾಗಿ ಕಾಡಿನ ಸಸಿಗಳ ಬಳಕೆ ತಪ್ಪಿಸಲು ಬೇಲಿಯ ಕಲ್ಲು ಕಂಬಕ್ಕೆ ಸಬ್ಸಿಡಿ ಕೊಡಬೇಕು.

(2) ಮಲೆನಾಡಿನಲ್ಲಿ ಸಿ ಮತ್ತು ಡಿ ಎಂದು ವರ್ಗೀಕರಿಸಬಹುದಾದ ಭೂಮಿ ಇಲ್ಲ. ಈಗಾಗಲೇ ಹಾಗೆ ವರ್ಗೀಕರಿಸಿರುವುದನ್ನು ರೈತರಿಗೇ ಬಿಡಬೇಕು. ಗುಡ್ಡಗಳ ತಲೆಯಲ್ಲಿ ಅರಣ್ಯ ಬೆಳೆಸಬೇಕು. ನೀಲಗಿರಿ, ಅಕೇಸಿಯಾಗಳಂಥ ಸಸ್ಯಗಳನ್ನು ಬೆಳೆಸಲೇ ಬಾರದು.

(4ನೇ ಪುಟಕ್ಕೆ)

ಜಿಲ್ಲಾ ಸಿ.ಪಿ.ಐ. ಗಮನವೀಗ ರೈತರ ಕಡೆಗೆ

ಜಿಲ್ಲೆಯಲ್ಲಿ ಪ್ರಮುಖ 'ಕೈಗಾರಿಕೆ'ಯಾದ ಕಾಫಿ ತೋಟಗಳಲ್ಲಿ ವ್ಯಾಪಕವಾಗಿ ಸಂಘಟನೆ ಹರಡಿರುವುದಲ್ಲದೆ ಇನ್ನಿತರ ಪ್ರಮುಖ ವಲಯಗಳಲ್ಲೂ ಗಮನಾರ್ಹವಾಗಿ ಕಾರ್ಮಿಕರ/ ನೌಕರರ ಸಂಘಟನೆ ಸಾಧಿಸಿರುವ ಸಿ. ಪಿ. ಐ. ಪಕ್ಷದ ಚಿಕ್ಕಮಗಳೂರು ಜಿಲ್ಲಾ ಘಟಕ ಈಗ ಜಿಲ್ಲೆಯ ರೈತರ ಕಡೆ ತನ್ನ ಗಮನವನ್ನು ಕೇಂದ್ರೀಕರಿಸುತ್ತಿದೆ.

ಕೊಡಿಗೆಹಿತ್ಲಿನಲ್ಲಿ ಎ. ಐ. ಟಿ. ಯು. ಸಿ.ಯ ಕಾಫಿ ಕಾರ್ಮಿಕರ ಸಂಘ ಸ್ಥಾಪನೆಯ ಪ್ರಯತ್ನಕ್ಕಾಗಿ ಬಂದಿದ್ದ ಸಿ.ಪಿ.ಐ. ಜಿಲ್ಲಾ ಕಾರ್ಯದರ್ಶಿ ಬಿ. ಕೆ. ಸುಂದರೇಶ್ 'ಮುಂಜಾವು' ಜೊತೆ ಮಾತನಾಡುತ್ತ ಪಕ್ಷದ ಸಂಘಟನಾ ಚಟುವಟಿಕೆಯ ಸ್ಥೂಲ ಚಿತ್ರಣ ನೀಡಿದರು.

ಬಗರ್ ಹುಕುಂ

ಜಿಲ್ಲೆಯಲ್ಲಿ 'ಸಿ ಅಂಡ್ ಡಿ' ಭೂಮಿ ಮತ್ತು ಬಗರ್ ಹುಕುಂನದು ಒಂದು ದೊಡ್ಡ ಸಮಸ್ಯೆಯಾಗಿದೆ. ಉತ್ತಮವಾದ ಸಾಗುವಳಿಯೋಗ್ಯವಾದ ಸುಮಾರು 15 ಸಾವಿರ ಎಕರೆಗೂ ಹೆಚ್ಚು ಭೂಮಿಯನ್ನು ಸಿ ಅಂಡ್ ಡಿ ಎಂದು ವರ್ಗೀಕರಿಸಲಾಗಿದೆ. ಇದನ್ನು ಪುನಃ ಸರ್ವೆ ಮಾಡಿ, ಸಾಗುವಳಿಗೆ ಯೋಗ್ಯವಾದ ಭೂಮಿಯನ್ನು ಮರು ವರ್ಗೀಕರಣ ಮಾಡುವುದಾಗಿ ಜಿಲ್ಲಾಧಿಕಾರಿಗಳು ಭರವಸೆ ಕೊಟ್ಟಿದ್ದರೂ ಅದು ಇನ್ನೂ ಕಾರ್ಯಗತವಾಗಿಲ್ಲ.

ಈ ಮಧ್ಯೆ, ಜನತಾ ಸರ್ಕಾರ ಬಂದ ಮೇಲೆ, ಬಡ ರೈತರು, ಕೃಷಿ ಕಾರ್ಮಿಕರು ಬಗರ್ ಹುಕುಂ ಸಾಗುವಳಿ ಮಾಡುತ್ತಿದ್ದ ಭೂಮಿಯಿಂದ ಅವರನ್ನು ತೆರವು ಮಾಡಿಸುವ ಚಟುವಟಿಕೆ ತೀವ್ರವಾಗಿ ಹೆಚ್ಚಿದೆ.

ಈ ಸಮಸ್ಯೆಯ ಬಗ್ಗೆ ಬಡ ರೈತರ, ಕೃಷಿ ಕಾರ್ಮಿಕರ ಬಗರ್ ಹುಕುಂ ಸಾಗುವಳಿಯನ್ನು ಅವರವರಿಗೇ ಖಾಯಂ ಮಾಡಿ ಕೊಡಲು ಒತ್ತಾಯಿಸಿ ಜೂನ್ ಮಧ್ಯದ ವೇಳೆಗೆ ತಮ್ಮ ಪಕ್ಷ ಜಿಲ್ಲಾದ್ಯಂತ ಚಳುವಳಿಯೊಂದನ್ನು ಆರಂಭಿಸಲಿದೆ ಎಂದು ಸುಂದರೇಶ್ ತಿಳಿಸಿದರು. (ನಾಲ್ಕನೇ ಪುಟಕ್ಕೆ)

"ಸ್ಥಳೀಯ ಶಿಕ್ಷಕರನ್ನು ಇನ್ನಾದರೂ ಖಾಯಂಗೊಳಿಸಿ"

ಮಾನ್ಯರೆ,

ಸುಮಾರು 5 ವರ್ಷಗಳಿಂದ ಪ್ರಾಥಮಿಕ ಶಾಲೆಗಳಲ್ಲಿ ಸೇವೆ ಸಲ್ಲಿಸುತ್ತಿರುವ 'ಸ್ಥಳೀಯ ಶಿಕ್ಷಕರನ್ನು ಖಾಯಂಗೊಳಿಸುವುದಾಗಿ ಪ್ರಾಥಮಿಕ ಶಿಕ್ಷಣ ಮಂತ್ರಿಗಳಾದ ಹೆಚ್. ಜಿ. ಗೋವಿಂದೇ ಗೌಡರು ಹೇಳಿಕೆ ನೀಡಿದ್ದಾರೆ. ರಾಜ್ಯ ಮಟ್ಟದ ಪತ್ರಿಕೆಗಳಲ್ಲಿ ಇದು ಪ್ರಕಟವಾಗಿದೆ. ಆದರೆ ಈ ಹೇಳಿಕೆ ಕೇವಲ ಆಶ್ವಾಸನೆ ರೂಪದ್ದೋ ಅಥವಾ ಆದೇಶರೂಪದ್ದೋ ತಿಳಿಯದು. ಏಕೆಂದರೆ ಈ ಬಗ್ಗೆ ಇನ್ನೂ ಯಾವುದೇ ಆದೇಶ ಬಂದಿಲ್ಲ.

ಈ ಶಿಕ್ಷಕರನ್ನು ಖಾಯಂಗೊಳಿಸುವಲ್ಲಿ ಯಾವುದೇ ಕಾನೂನಿನ ತೊಡಕಿಲ್ಲ. ಆದ್ದರಿಂದ ಬೇಗನೆ ಖಾಯಂಗೊಳಿಸಲಾಗುವುದೆಂದು ರಾಚಯ್ಯನವರಿಂದ ಹಿಡಿದು ಗೋವಿಂದ ಗೌಡರವರೆಗೆ ಜನತಾ ಸರ್ಕಾರದ ಎಲ್ಲಾ 4 ಮಂದಿ ಶಿಕ್ಷಣ ಮಂತ್ರಿಗಳೂ ಹೇಳಿದ್ದರೂ, ಇನ್ನೂ ರಾಜ್ಯದಾದ್ಯಂತ 3000 ಜನ (ಜಿಲ್ಲೆಯಲ್ಲಿ 130 ಜನ) ಇಂಥ ಶಿಕ್ಷಕರು ಆಯ್ಕೆ ಹೊಂದದೇ ಉಳಿದಿದ್ದು ಅವರು ಹಾಗೆಯೇ ಉಳಿಯುವ ಸಂಭವವಿದೆ.

ಆದ್ದರಿಂದ ಈಗಲಾದರೂ ಶ್ರೀಯುತ ಗೋವಿಂದೇ ಗೌಡರು ತಮ್ಮ ಆಶ್ವಾಸನೆಯಂತೆ ಈ ಸಮಸ್ಯೆಯನ್ನು ಶಾಶ್ವತವಾಗಿ ಬಗೆಹರಿಸಿ ಬೇಗನೇ ಆದೇಶಹೊರಡಿಸಬೇಕೆಂದು ವಿನಂತಿಸುತ್ತೇವೆ.

ವಿ. ರಾಮಕೃಷ್ಣ, ಅಧ್ಯಕ್ಷ,
ಪ್ರಾಥಮಿಕ ಶಾಲಾ ಸ್ಥಳೀಯ
ಶಿಕ್ಷಕರ ಸಂಘ,
ಚಿಕ್ಕಮಗಳೂರು ಜಿಲ್ಲಾ ಘಟಕ

ಪ್ರತಿಕ್ರಿಯೆ–5

(2ನೇ ಪುಟದಿಂದ)

ಹೀಗೆ ನಮ್ಮ ಸಂಸ್ಕೃತಿಯಲ್ಲಿ ಅಭಿಮಾನ ಕಳೆದುಕೊಂಡು ಯಾವುದೋ ಕ್ಷುಲ್ಲಕ ದುರಭಿಮಾನದಿಂದ ತಮ್ಮ ಮಕ್ಕಳನ್ನು ಸಂಸ್ಕೃತಿಯಿಂದ ಹೊರತಾಗಿ ಬೆಳೆಸುವ, 'ಫಾರಿನರ್' ಮಾಡುವ ಹುಚ್ಚು ಮಂಗನಾಟ ಬಿಟ್ಟು ಪೋಷಕರು ಸ್ವಲ್ಪ ಬದಲಾಗಬೇಕು.

—ರಮೇಶ್

ಸರ್ಕಾರಿ ಕಚೇರಿಗಳಲ್ಲಿ ಮುಖ್ಯಾಧಿಕಾರಿಯನ್ನು ಕಾಣಬೇಕೆಂಬ ಸಲಹೆ ಬಗ್ಗೆ...

ಮಾನ್ಯರೆ,

ತಾ|| 14–5–85 ರಂದು ಬಿಳಗದ್ದೆಯಲ್ಲಿ ಮಂತ್ರಿ ಗೋವಿಂದ ಗೌಡರು ಮಾತನಾಡುತ್ತ, ಎಲ್ಲರೂ ಸರ್ಕಾರಿ ಕಚೇರಿಗಳಲ್ಲಿ ಮುಖ್ಯಾಧಿಕಾರಿಗಳನ್ನೇ ಕಂಡು ಕೆಲಸ ಮಾಡಿಸಿಕೊಂಡು ಬನ್ನಿರೆಂದು ಕರೆಯಿತ್ತರು.

ಈ ಅಧಿಕಾರಿಗಳು ಕಚೇರಿಯಲ್ಲಿ ಇದ್ದ ದಿನವಾದರೆ ಕೆಲಸವಾಗಬಹುದು. ಜೊತೆಗೆ "ನೀವು ಇಲ್ಲೇ ಇರಿ. ಕೆಲಸ ಮಾಡಿಸಿಕೊಡುತ್ತೇನೆ" ಎಂದು ಹೇಳುವ ಒಬ್ಬ ಅಧಿಕಾರಿಯನ್ನೂ ನಾನು ಈವರೆಗೆ ಕಂಡಿಲ್ಲ. ಅಲ್ಲದೆ, ಮಾನವೀಯತೆಯಿಂದ ನಮಸ್ಕಾರ ಹೇಳಿ ಇದ್ದ ಆಸನದಲ್ಲಿ ಕೂರಲು ಹೇಳುವ ಅಧಿಕಾರಿಯೂ ಸಿಗುವುದು ಅಪರೂಪ. ಅವರು ಕೂರಲು ಹೇಳದೆ ಕೂರುವ ಆತ್ಮೀಯತೆ ನಮಗೆ ಮೈಗೂಡಿಲ್ಲ.

ಅವರುಗಳಾದರೆ ಹೋದಲ್ಲೂ—ಆಸನ, ನಮಸ್ಕಾರಗಳು. ಕಚೇರಿಯಲ್ಲಿ ಹೇಗೂ ಇದ್ದದ್ದೇ. ರಾಜಕಾರಣಿಗಳ ಎದುರು ತಾವು ತೋರಿಸುವ ವಿಧೇಯ-ವಿನಯದ ಅರ್ಧವನ್ನು ನಾಗರಿಕರೆದುರು ತೋರಿಸಲು ಅಧಿಕಾರಿಗಳು ತಯಾರಿಲ್ಲ

ಇಂಥಲ್ಲಿ ಮಾನ್ಯ ಮಂತ್ರಿಗಳ ಕರೆ ಎಷ್ಟು ಅನುಸರಿಸಲು ಸಾಧ್ಯವಿದೆಯೆಂಬುದೋ.

—ಕಾವಳಿ ಲಕ್ಷ್ಮೀನಾರಾಯಣಪ್ಪ.

ಸಿ.ಪಿ.ಐ. ಗಮನ ಈಗ ರೈತರ ಕಡೆ

(ಮೂರನೇ ಪುಟದಿಂದ)

ಶೃಂಗೇರಿ, ಕೊಪ್ಪ, ನ. ರಾ. ಪುರ ತಾ॥ ಗಳಲ್ಲಿ ಹನಾವೀಗ ಇಂಥ ರೈತರ ಸಂಪರ್ಕ ಬೆಳೆಸಿದ್ದೇವೆ. ಹಲವು ಕಡೆ, ಮುಖ್ಯವಾಗಿ ಮಲಯಾಳಿ ಜನಸಂಖ್ಯೆ ಹೆಚ್ಚಿರುವ ಕಡೆ ನಮ್ಮ ಪಕ್ಷದ ಸಾಕಷ್ಟು ಜನ ಬೆಂಬಲಿಗರು, ಹಿತೈಷಿಗಳು ಇದ್ದಾರೆ. ಆದರೆ ಇಲ್ಲೆಲ್ಲಾ ಇನ್ನೂ ಸಂಘಟನೆಯ ರೂಪ ಕೊಡಬೇಕಾಗಿದೆ ಅಷ್ಟೇ ಎಂದರು.

ಅಂಗನವಾಡಿ

ಜಿಲ್ಲೆಯ ಕೊಪ್ಪ, ಕಡೂರು ಮತ್ತು ಮೂಡಿಗೆರೆಯ ತಾ॥ ಗಳ ಸುಮಾರು 600 ಜನ ಅಂಗನವಾಡಿ ಕಾರ್ಯಕರ್ತೆಯರ ಸ್ಥಿತಿಗತಿಯನ್ನು ಬಹಳ ಕಳಕಳಿಯಿಂದ ವಿವರಿಸಿದ ಸುಂದರೇಶ್, ಆ ಹೆಣ್ಣು ಮಕ್ಕಳು ಬಹಳ ಕ್ರೂರವಾದ ಪರಿಸ್ಥಿತಿಯಲ್ಲಿ, ಅಧಿಕಾರಿಗಳ ಮರ್ಜಿಯ ಮೇಲೆ ಅವಲಂಬಿತರಾಗಿ ಕೆಲಸಮಾಡುತ್ತಿದ್ದಾರೆಂದರು.

ಬಾಣಂತಿಯರ ಮತ್ತು ಚಿಕ್ಕಮಕ್ಕಳ ಆರೈಕೆ, ಮಕ್ಕಳಿಗೆ ಆಟ-ಪಾಟ ಮಾಡಿಸುವುದು, ಅವರಿಗೆ ಆಹಾರ ಬೇಯಿಸಿಕೊಡುವುದು, ಅದಕ್ಕಾಗಿ ಕಟ್ಟಿಗೆ ತಂದುಕೊಳ್ಳುವುದು, ಆಹಾರ ಸಾಮಗ್ರಿಗಳ ಜೋಪಾಸನೆ, ಮಹಿಳೆಯರ-ಮಕ್ಕಳ ಬಗ್ಗೆ ಹಲವು ನಮೂನೆಯ ಅಂಕಿ ಅಂಶ ಸಂಗ್ರಹಣೆ, ಕುಟುಂಬ ಯೋಜನೆಗೆ ಜನರನ್ನು ಕರೆ ತರುವುದು, ಆರೋಗ್ಯ ಇಲಾಖೆ ಮತ್ತು ಅಂಗನವಾಡಿಯ ಅಧಿಕಾರಿಗಳು ಬಂದಾಗ ಅವರಿಗೆ ಸಹಕರಿಸುವುದು, ಆಗಾಗ್ಗೆ ಮುಖ್ಯ ಕಚೇರಿಗೆ ಬಂದು ಮೀಟಿಂಗ್‌ನಲ್ಲಿ ಭಾಗವಹಿಸುವುದು, ಆಹಾರ ಸಾಮಗ್ರಿ ಒಯ್ಯುವುದು, ನಾನಾ ತರಹೆಯ ದಾಖಲೆಗಳನ್ನು ಸಿದ್ಧಪಡಿಸುವುದು—ಹೀಗೆ ಈ ಕಾರ್ಯಕರ್ತೆಯರಿಗೆ ಅಸಂಖ್ಯ ಜವಾಬ್ದಾರಿಗಳನ್ನು ವಹಿಸಲಾಗಿದೆ.

ಆದರೆ ಅವರಿಗೆ ಕೊಡುವ 'ಗೌರವಧನ' ಕನಿಷ್ಠ ಕಿಮ್ಮತ್ತಿನಷ್ಟು ಅದರ ಮೇಲೆ ಕೆಲಸದ ಭದ್ರತೆಯಿಲ್ಲ. ಅಂಗನವಾಡಿಗೆ ಎಲ್ಲ ಕಡೆ ಅಲ್ಲಿನ ವಸ್ತು, ಧಾನ್ಯ ಮುಂತಾದುವನ್ನು ಭದ್ರವಾಗಿಟ್ಟುಕೊಳ್ಳಲಿಕ್ಕೆ ಸೂಕ್ತವಾದ ವ್ಯವಸ್ಥೆಯಿಲ್ಲ. ವಾಸಕ್ಕೆ ಯಾರ್ಯಾರನ್ನೋ ಅವಲಂಬಿಸಬೇಕು. ಇದರ ಮೇಲೆ, ಇವರ ಬಗ್ಗೆ ಗ್ರಾಮದ ಚೇರ್ಮನ್ನರು ನಿಗಾ ಇಡುವ ನಿಯಮದಿಂದಾಗಿ ಅವರ ಮರ್ಜಿ ಕಾಯಬೇಕು. ಎಷ್ಟೋ ವೇಳೆ ಇದು ಎಂಥ ವಿಪತ್ಕಾರಿ ಎಂದು ಬೇರೆ ಹೇಳಬೇಕಾಗಿಲ್ಲ.

ಹೇಗೂ ಕೇಂದ್ರ ಸರ್ಕಾರ ಮಹಿಳಾ ಮತ್ತು ಮಕ್ಕಳ ಕಲ್ಯಾಣಕ್ಕೆ ವಿಶಿಷ್ಟ ಗಮನ ಕೊಟ್ಟದ್ದು, ಇದು ಸರ್ಕಾರಗಳ ಹೊಣೆಯೂ ಆದ್ದರಿಂದ ಅಂಗನವಾಡಿ ಕಾರ್ಯಕ್ರಮವನ್ನು ಶಾಶ್ವತವಾಗಿ, ಸಮಗ್ರವಾಗಿ ಮುಂದುವರಿಸಬೇಕೆಂಬ ಒತ್ತಾಯದೊಂದಿಗೆ, ಈ ಕ್ರೂರ ಪರಿಸ್ಥಿತಿಯಿಂದ ಈ ಕಾರ್ಯಕರ್ತೆಯರಿಗೆ ರಕ್ಷಣೆ ದೊರಕಿಸಿ, ಯೋಗ್ಯ ಸಂಬಳ, ಕೆಲಸದ ಭದ್ರತೆ ಮತ್ತು ಇತರ ಸೇವಾ ಪರಿಸ್ಥಿತಿಯ ಸುಧಾರಣೆಗಾಗಿ ಅಂಗನವಾಡಿ ಕಾರ್ಯಕರ್ತೆಯರನ್ನು ಜಿಲ್ಲೆಯಲ್ಲಿ ಎಐಟಿಯುಸಿ ಸಂಘಟಿಸಿ, ರಾಜ್ಯಮಟ್ಟದ ಸಂಘಟನೆಯ ಪ್ರಯತ್ನವೂ ನಡೆಯುತ್ತಿದೆ. ಕೊಪ್ಪ ತಾ॥ ಮಟ್ಟದ ಸಮಾವೇಶ ಸದ್ಯದಲ್ಲೇ ಜರುಗಲಿದೆ ಎಂದೂ ಸುಂದರೇಶ್ ತಿಳಿಸಿದರು.

ಲೋಕೋಪಯೋಗಿ ಇಲಾಖೆಯ ದಿನಗೂಲಿ ಕಾರ್ಮಿಕರನ್ನು (82ರ ಈಚೆನವರು) ವಜಾ ಮಾಡಿದ್ದನ್ನು ಈ ಕಾರ್ಮಿಕರ ರಾಜ್ಯಮಟ್ಟದ ಏಕೈಕ ಸಂಘಟನೆ (ಎಐಟಿಯುಸಿಗೆ ಸೇರಿದ್ದು) ವಿರೋಧಿಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತಿದೆ ಎಂದ ಸುಂದರೇಶ್, ಈ ಸಂದರ್ಭದಲ್ಲಿ ಸರ್ಕಾರದ ಒಂದು ನೀತಿಯನ್ನು ಮನಮುಟ್ಟುವಂತೆ ವಿಶ್ಲೇಷಿಸಿದರು. ಅದೆಂದರೆ, **ನೌಕರರು ಮತ್ತು ಕೆಲಸಗಾರರು ಖಾಯಂ ಅಲ್ಲದೆ ಇದ್ದಷ್ಟೂ ಸರ್ಕಾರಕ್ಕೆ ಅಗ್ಗದ ಕೂಲಿಗಳು (ಚೀಪ್ ಲೇಬರ್) ಸಿಗುತ್ತಾರೆ. ಖಾಯಂ ಆದರೆ ಅವರಿಗೆ ಸಂಬಳ ಸಾರಿಗೆ ಎಲ್ಲರಂತೆ ಕೊಡಬೇಕು. ಭದ್ರತೆಯಿರುತ್ತದೆ.** ಆದ್ದರಿಂದ ಸರ್ಕಾರ ಈ ತಂತ್ರಗಳನ್ನು ಅನುಸರಿಸುತ್ತಿದೆ.

ಈ ಕಾರ್ಮಿಕರು ಲೋಕೋಪಯೋಗಿ ಇಲಾಖೆಗೆ ಹೆಚ್ಚುವರಿ ಏನಲ್ಲ. ನಿಜವಾಗಿ ಇನ್ನೂ ಹೆಚ್ಚು ಜನ ಬೇಕಾಗಿದೆ. ಇಲಾಖೆ ಬೆಳೆಯುತ್ತಿದೆ. ಆದರೆ ಅದಕ್ಕೆ ತಕ್ಕಂತೆ ಕಾರ್ಮಿಕರ ಸಂಖ್ಯೆ ಹೆಚ್ಚುತ್ತಿಲ್ಲವಾಗಿ, ಕಾರ್ಮಿಕರಿಗೆ ಕೆಲಸದ ಹೊರೆ ಮಿತಿಮೀರುತ್ತಿದೆ. ಸಾಲದ್ದಕ್ಕೆ ಸರ್ಕಾರದ ವಾದವೇದರೆ. 240 ದಿನ ಕೆಲಸ ಮಾಡಿದ ಒಬ್ಬ ಕಾರ್ಮಿಕ ಕಾನೂನಿನ ವ್ಯಾಪ್ತಿಗೊಳಪಟ್ಟು ರಕ್ಷಣೆಗೆ ಅರ್ಹನಾಗುತ್ತಾನೆ. ಆದ್ದರಿಂದ ವಜಾ ಮಾಡಲಾಗಿದೆ.

ಇದೇ ನೀತಿ ಸ್ಥಳೀಯ ಶಿಕ್ಷಕರು, ಅಂಗನವಾಡಿ ಕಾರ್ಯಕರ್ತೆಯರು—ಎಲ್ಲರಿಗೂ ಅನ್ವಯಿಸುತ್ತದೆ. ನಾವು ಜಿಲ್ಲೆಯಲ್ಲಿ ಈ ಎಲ್ಲರನ್ನೂ ಈಗಾಗಲೇ ಸಂಘಟಿಸಿದ್ದೇವೆ—ಎಂದು ಸುಂದರೇಶ್ ವಿವರಿಸಿದರು.

ಜಿಲ್ಲಾ ಪರಿಷತ್ ಚುನಾವಣೆ ನಡೆದಲ್ಲಿ ತಮ್ಮ ಪಕ್ಷ ಜಿಲ್ಲೆಯ ಎಲ್ಲಾ ತಾ॥ಗಳಲ್ಲೂ ಸ್ಪರ್ಧಿಸುತ್ತದೆ. ತರೀಕೆರೆ ಮತ್ತು ಮೂಡಿಗೆರೆ ತಾ॥ಗಳಲ್ಲಿ ಪೂರ್ಣ ಪ್ರಮಾಣದಲ್ಲಿ ಸ್ಪರ್ಧಿಸುವುದಲ್ಲದೆ, ಸಾಕಷ್ಟು ಸ್ಥಾನಗಳನ್ನು ಗೆಲ್ಲುವುದೂ ಖಂಡಿತ. ಆದರೆ ಈಗ ತಮ್ಮ ಪಕ್ಷ ಸಂಘಟನೆ ಬೆಳೆಸುವುದಕ್ಕೆ ಆದ್ಯ ಗಮನ ಕೊಟ್ಟಿದೆ ಎಂದೂ ಅವರು ಹೇಳಿದರು.

ಅರಣ್ಯಾಭಿವೃದ್ಧಿ ವಿಚಾರ ಸಂಕಿರಣ

(3ನೇ ಪುಟದಿಂದ)

(3) ಕಾಡಿನಲ್ಲಿ ಬಿದ್ದು ಮಣ್ಣಾಗುವ ಅಸಂಖ್ಯ ಮರಗಳನ್ನು ಸಂಗ್ರಹಿಸಿ ಸೌದೆ ಅಥವಾ ನಾಟಕ್ಕಾಗಿ ಉಪಯೋಗಿಸಬೇಕು.

(ಒಬ್ಬ ಪ್ರತಿನಿಧಿಯ ಒಂದು ಆಶಯ ಹೀಗಿತ್ತು: ಅರಣ್ಯ ಅಧಿಕಾರಿಗಳಾದ ಡಿ. ಸಿ. ಎಫ್., ಡಿ. ಎಫ್. ಒ., ಎ. ಸಿ. ಎಫ್. ಮುಂತಾದವರು ಬರೀ ಅಧಿಕಾರಿಗಳಲ್ಲ. ಅವರು ಒಳ್ಳೆಯ ಪರಿಸರ ಪ್ರೇಮಿಗಳಾಗಿಯೂ ವರ್ತಿಸಬೇಕು.)

ಇಂದು ಜನರ ನಡುವೆ ಪರಸ್ಪರ ಪ್ರೇಮ, ಸೌಹಾರ್ದ ನೊಡಲಿಕ್ಕಷ್ಟು ಇಲ್ಲವಾಗಿದೆ. ಹಾಗೆಯೇ ಜನತೆ ಮತ್ತು ಸರ್ಕಾರಗಳ ನಡುವೆಯೂ ಇಂಥ ಪ್ರೀತಿ-ಸೌಹಾರ್ದ ನಶಿಸಿಹೋಗಿದೆ. ಇದು ಪರಿಸರದ ಮೇಲೂ ಪರಿಣಾಮ ಮಾಡುತ್ತಿದೆ. ಈ ಸ್ಥಿತಿ ಸರಿಹೋಗದೆ ಪರಿಸರದ ಮೇಲೂ ಪ್ರೇಮ ಮೂಡುತ್ತದೆ.

ಜನರ ಮನಸ್ಸಿನ ಈ ಸ್ಥಿತಿ, ಆ ಮನಸ್ಸಿನ ದರ್ಪಣವಾದ ಇಂದಿನ ಸಾಹಿತ್ಯದಲ್ಲೂ ಎದ್ದು ಕಾಣುತ್ತದೆ. ಇಂದಿನ ಸಾಹಿತ್ಯದಲ್ಲಿ ಕೋಪ, ಆಕ್ರೋಶಗಳು ಹೆಚ್ಚು ಹೆಚ್ಚು ಪ್ರತಿಫಲಿಸುತ್ತಿವೆ. ಸಮಾಜದೊಳಗೆ ಇಂಥ ಮನಃಸ್ಥಿತಿ ಉಂಟಾಗಲಿಕ್ಕೆ ಇಂದು ಬದುಕೇ ಒಂದು ದುರ್ಭರ ಹೋರಾಟವಾಗಿರುವುದು ಕಾರಣ. ಈ ದುರ್ಭರತೆ ಕೊನೆಗೊಂಡು ಬದುಕು ಒಂದು ಸುಖಾನುಭವವಾದಾಗ ಈ ಸ್ಥಿತಿ ಬದಲಾಗುತ್ತದೆ. ("ನಾವು ಈ 'ಸ್ಟ್ರಗಲ್ ಫಾರ್ ಎಕ್ಸಿಸ್ಟೆನ್ಸ್'ನ್ನು ಹೋಗಲಾಡಿಸಬೇಕು") ಎಂದು ಶೃಂಗೇರಿಯಲ್ಲಿ ಪರಿಸರ ಸಂಶೋಧನೆ ನಡೆಸುತ್ತಿರುವ ಡಾ॥ ರಾಮಚಂದ್ರಸ್ವಾಮಿ ಒಂದು ಆಳವಾದ ಚಿಂತನೆ ಮುಂದಿಟ್ಟರು. (ಊಟದ ಹೊತ್ತಾದ್ದರಿಂದ ಇದನ್ನು ಎಷ್ಟು ಜನ ಗ್ರಹಿಸಿದರೋ ಗೊತ್ತಿಲ್ಲ.)

ಕೊಪ್ಪ ಲಯನ್ಸ್ ಆಶ್ರಯದಲ್ಲಿ ಸಾಮೂಹಿಕ ವಿವಾಹ

ಕೊಪ್ಪ: ಇಲ್ಲಿನ ಲಯನ್ಸ್ ಕ್ಲಬ್ ಆಶ್ರಯದಲ್ಲಿ ಮೇ 26 ರಂದು ಪ್ರತಿ ವರ್ಷದಂತೆ ಸಾಮೂಹಿಕ ವಿವಾಹ ನಡೆಯಿತು. ಸುಮಾರು 30 ಜೋಡಿಗಳು ಈ ಸಂದರ್ಭದಲ್ಲಿ ದಂಪತಿಗಳಾದರು.

ತಲೆಗೆ ನಾಗರಹಾವು ಕಚ್ಚಿ ನಿಧನ

ಕಿಗ್ಗ: ಇಲ್ಲಿಗೆ ಸಮೀಪದ ಗುಡ್ಡೇಕೊಪ್ಪ ಅನಂತಯ್ಯನವರ ಮಗ ಕೇಶವ (16 ವರ್ಷ) ಎಂಬುವನಿಗೆ ಮೇ 27ರಂದು ಬೆಳಿಗ್ಗೆ ಬಚ್ಚಲ ಮನೆಯಲ್ಲಿ ತಲೆಗೆ ನಾಗರಹಾವು ಕಚ್ಚಿ ಆತನೇ ಶೃಂಗೇರಿಗೆ ಆಸ್ಪತ್ರೆಗೆಂದು ಹೊರಟು ಯಾರದೋ ಮೋಟಾರು ಸೈಕಲ್ಲಿನಲ್ಲಿ ವೈದ್ಯರ ಬಳಿಗೆ ಹೋದರೂ ಅಷ್ಟರೊಳಗೆ ವಿಷವೇರಿ ಸಾವಪ್ಪಿದ ದುರಂತ ವರ್ತೆ ತಿಳಿದು ಬಂದಿದೆ. ಆ ವೈದ್ಯರಲ್ಲಿ ಸಂಬಂಧಪಟ್ಟ ಜೀವರಕ್ಷಕ ಔಷಧವಿರಲಿಲ್ಲವೆಂದು ಹೇಳಲಾಗಿದೆ.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್; ಅಚ್ಚು: ದೀಪಟಿಗೆ ಅಚ್ಚುಕೂಟ, ಕೊಪ್ಪ.